†**ಶ್ರೀ ಪಿ.ಜಿ.ಆರ್. ಸಿಂಧ್ಯಾ :** ಮಾನ್ಯ ಅಧ್ಯಕ್ಷರೆ, ಅವರ ಸಲಹೆಯನ್ನು ಸರ್ಕಾರ ಸ್ವೀಕಾರ ಮಾಡಿ ಆ ಬಗ್ಗೆ ಪರಿಶೀಲನೆಯನ್ನು ಮಾಡಲಾಗುವುದು.

ವಿಷಯ : (viii) ಸಿಂಗಟಾಲೂರು ಏಕ ನೀರಾವರಿ ಯೋಜನೆಯಿಂದ ತುಂಗಾಭದ್ರಾ ಅಣೆಕಟ್ಟೆಯಲ್ಲಿ ಬರುವ ರೈತರಿಗೆ ನೀರಿನ ಕೊರತೆ ಉಂಟಾಗಿರುವ ಬಗ್ಗೆ

ಶ್ರೀ ಎನ್.ಎಸ್. ಭೋಸರಾಜು (ಮಾನ್ವಿ) : ಮಾನ್ಯ ಅಧ್ಯಕ್ಷರೆ, ಸಿಂಗಟಾಲೂರು ನೀರಾವರಿ ಯೋಜನೆಯಿಂದ ತುಂಗಭದ್ರಾ ಅಣೆಕಟ್ಟಿಗೆ ಬರುವ ರೈತರಿಗೆ ನೀರಿನ ಕೊರತೆ ಉಂಟಾಗಿರುವ ಸಮಸ್ಯೆ ಬಗ್ಗೆ ಮಾನ್ಯ ಜಲ ಸಂಪನ್ಮೂಲ ಸಚಿವರ ಗಮನ ಸೆಳೆಯುತ್ತೇನೆ.

† **ಶ್ರೀ ಪಿ.ಜಿ.ಆರ್. ಸಿಂಧ್ಯಾ(ಭಾರಿ, ಮಧ್ಯಮ ಮತ್ತು ಸಣ್ಣ ಕೈಗಾರಿಕಾ ಸಚಿವರು) (ಜಲ ಸಂಪನ್ಮೂಲ ಸಚಿವರ ಪರವಾಗಿ) :** ಮಾನ್ಯ ಅಧ್ಯಕ್ಷರೆ,

ಕೊಪ್ಪಳ ಮತ್ತು ಗದಗ ಜಿಲ್ಲೆಯ ಬರ ಪೀಡಿತ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸುವ ಉದ್ದೇಶದಿಂದ ಈ ಯೋಜನೆಗಾಗಿ ರೂ. 595.00 ಕೋಟಿ ಮೊತ್ತದ ಸಮಗ್ರ ಯೋಜನಾ ವರದಿಯನ್ನು ತಯಾರಿಸಲಾಗಿದ್ದು. ಇದಕ್ಕೆ ಸರ್ಕಾರದ ಆದೇಶ ಸಂ : ನೀಇ:90:ಎಂಟಿಪಿ:98. ದಿನಾಂಕ 29.12.2000 ಅನ್ವಯ ಆಡಳಿತಾತ್ಮಕ ಅನುಮೋದನೆ ಹಾಗೂ ಮುಖ್ಯ ಇಂಜಿನಿಯರು, ನೀರಾವರಿ ಕೇಂದ್ರ ವಲಯ, ಮುನಿರಾಬಾದ್, ರವರಿಂದ ಮಂಜೂರಾತಿ ಸಂ; 28/2001–02 ರನ್ವಯ ತಾಂತ್ರಿಕ ಮಂಜೂರಾತಿ ನೀಡಲಾಗಿತ್ತು.

ಒಟ್ಟಾರೆ ಈ ಯೋಜನೆಗೆ 18.55 ಟಿ.ಎಂ.ಸಿ. ಅಡಿಗಳಷ್ಟು ನೀರಿನ ಹಂಚಿಕೆಯಾಗಿರುತ್ತದೆ.

ಈ ಯೋಜನೆಯಿಂದ 18.55 ಟಿ.ಎಂ.ಸಿ. ಅಡಿಗಳಷ್ಟು ನೀರನ್ನು ಉಪಯೋಗಿಸಿಕೊಂಡು ಬಳ್ಳಾರಿ, ಕೊಪ್ಪಳ, ಗದಗ ಜಿಲ್ಲೆಗಳ ಸುಮಾರು 1,18,000 ಎಕರೆ (11,67,000 ಎಕರೆ ಬೆಳೆ ಪ್ರದೇಶ) ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಬಹುದಾಗಿದೆ. ತಾಲ್ಲೂಕುವಾರು ನೀರಾವರಿ ಕ್ಷೇತ್ರದ ವಿವರಗಳು ಈ ಕೆಳಗಿನಂತಿವೆ.

ತಾಲ್ಲೂಕು	ನೀರಾವರಿ ಕ್ಷೇತ್ರ	ಬೆಳೆ ಪ್ರದೇಶ
ಹೂವಿನ ಹಡಗಲಿ (ಬಳ್ಳಾರಿ ಜಿಲ್ಲೆ)	20,000 ಎಕರೆ	28,000 ಎಕರೆ
ಮುಂಡರಗಿ (ಗದಗ ಜಿಲ್ಲೆ)	49,100 ಎಕರೆ	69,640 ಎಕರೆ
ಗದಗ (ಗದಗ ಜಿಲ್ಲೆ)	40,900 ಎಕರೆ	58,010 ಎಕರೆ
ಕೊಪ್ಪಳ (ಕೊಪ್ಪಳ ಜಿಲ್ಲೆ)	8,000 ಎಕರೆ	11,350 ಎಕರೆ
ಒಟ್ಟು	**1,18,000 ಎಕರೆ**	**1,67,000 ಎಕರೆ**
	47,754 ಹೆಕ್ಟೇರ್	**76,584 ಹೆಕ್ಟೇರ್**

ಪ್ರಸ್ತಾಪಿತ 18.55 ಟಿ.ಎಂ.ಸಿ. ಉಪಯೋಗದ ಸಿಂಗಟಾಲೂರು ಯೋಜನೆಯಿಂದ ತುಂಗಭದ್ರಾ ಯೋಜನಾ ಪ್ರದೇಶದ ಮೇಲೆ ಪರಿಣಾಮ ಉಂಟಾಗುತ್ತದೆ ಎಂಬ ಆತಂಕವನ್ನು ತುಂಗಭದ್ರಾ ಅಚ್ಚುಕಟ್ಟು ಪ್ರದೇಶದ ರೈತರು ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಈ ವಿಷಯವನ್ನು ಅಧ್ಯಯನ ಮಾಡಿ ವರದಿಯನ್ನು ನೀಡುವಂತೆ ಶ್ರೀ ಕೆ.ಸಿ. ರೆಡ್ಡಿಯವರ ಅಧ್ಯಕ್ಷತೆಯ ತಾಂತ್ರಿಕ ಸಲಹಾ ಸಮಿತಿಗೆ ಸರ್ಕಾರದ ಆದೇಶ ಸಂ. ಜಿಸಂಇಂ. 90 ಎಂಟಿಪಿ. 98 ದಿನಾಂಕ 7.11.01 ರನ್ವಯ ವಹಿಸಲಾಗಿತ್ತು.

ಸದರಿ ಸಮಿತಿಯ ಸುದೀರ್ಘ ಪರಿಶೀಲನೆಯ ನಂತರ ತನ್ನ ವರದಿಯನ್ನು ಸರ್ಕಾರಕ್ಕೆ ಫೆಬ್ರವರಿ 2002ರಲ್ಲಿ ಸಲ್ಲಿಸಿರುತ್ತದೆ. ವರದಿಯನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿದ ನಂತರ ಸಿಂಗಟಾಲೂರು ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ ಸರ್ಕಾರದ ಆದೇಶ ಸಂ. ಜಿಸಂಇ.115 ವಿಭ್ಯಾಇ. 2003. ದಿನಾಂಕ: 6.9.03ರಲ್ಲಿ ಕೆಳಕಾಣಿಸಿದ ಷರತ್ತುಗಳನ್ವಯ ಪರಿಷ್ಕೃತ ಆದೇಶ ನೀಡಲಾಗಿದೆ.

1. ಮಳೆಗಾಲದ ಸಮಯದಲ್ಲಿ ಮಾತ್ರ ಹೆಚ್ಚುವರಿ ನೀರನ್ನು ಬಳಸತಕ್ಕದ್ದು
2. ಸಿಂಗಟಾಲೂರು ಏತ ನೀರಾವರಿ ಯೋಜನೆಯ ಸಂಗ್ರಹಣೆ ಸಾಮರ್ಥ್ಯ 2.6 ಟಿ.ಎಂ.ಸಿ. ಇರತಕ್ಕದ್ದು.
3. lean Seasonನಲ್ಲಿ 2.6 ಟಿ.ಎಂ.ಸಿ.ಗೂ ಹೆಚ್ಚು ನೀರನ್ನು ಬಳಸತಕ್ಕದ್ದಲ್ಲ
4. ಕುಡಿಯುವ ಹಾಗೂ ಅಗತ್ಯತೆಗಳ ಪೂರೈಕೆಗಾಗಿ ಮಾತ್ರವೇ 2.6 ಟಿ.ಎಂ.ಸಿ. ನೀರನ್ನು ಬಳಸತಕ್ಕದ್ದು.
5. ಏತ ನೀರಾವರಿ ಯೋಜನೆಯು ಕೇವಲ ಏಕ ಬೆಳೆಗೆ ಮಾತ್ರ ಇರತಕ್ಕದ್ದು.
6. ತುಂಗಭದ್ರಾ ಯೋಜನೆಗೆ ನಿಗದಿಗೊಳಿಸಲಾದ ಪ್ರಮಾಣದಷ್ಟು ನೀರು ನವೆಂಬರ್ ತಿಂಗಳಿನಿಂದ ಮೇ ತಿಂಗಳವರೆಗೆ ಹರಿಯುವಂತೆ ಮೇಲ್ವಿಚಾರಣೆ ವಹಿಸತಕ್ಕದ್ದು.

ಸದರಿ ಆದೇಶದಲ್ಲಿ ವಿಧಿಸಲಾದ ಷರತ್ತುಗಳಂತೆ ಯೋಜನಾ ವರದಿಯನ್ನು ಪರಿಷ್ಕರಿಸಿ 15.95 ಟಿ.ಎಂ.ಸಿ. (ಆವಿಯ ಪ್ರಮಾಣ 0.532 ಟಿ.ಎಂ.ಸಿ. ಸೇರಿ) ನೀರನ್ನು ಉಪಯೋಗಿಸಿಕೊಂಡು 1,67,000 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಪ್ರಸ್ತಾವನೆ ಮಾಡಲಾಗಿದೆ. ತಾಲ್ಲೂಕುವಾರು ನೀರಾವರಿ ಕ್ಷೇತ್ರದ ವಿವರಗಳು ಈ ಕೆಳಗಿನಂತಿವೆ.

ತಾಲ್ಲೂಕು	ನೀರಾವರಿ ಕ್ಷೇತ್ರ	ಬೆಳೆ ಪ್ರದೇಶ
ಹೂವಿನ ಹಡಗಲಿ (ಬಳ್ಳಾರಿ ಜಿಲ್ಲೆ)	40,000 ಎಕರೆ	40,000 ಎಕರೆ
ಮುಂಡರಗಿ (ಗದಗ ಜಿಲ್ಲೆ)	51,000 ಎಕರೆ	51,000 ಎಕರೆ
ಗದಗ (ಗದಗ ಜಿಲ್ಲೆ)	40,000 ಎಕರೆ	40,000 ಎಕರೆ
ಕೊಪ್ಪಳ (ಕೊಪ್ಪಳ ಜಿಲ್ಲೆ)	36,000 ಎಕರೆ	36,000 ಎಕರೆ
ಒಟ್ಟು	**1,67,000 ಎಕರೆ**	**1,67,000 ಎಕರೆ**

ಪರಿಷ್ಕೃತ ಯೋಜನಾ ವರದಿಯನ್ನು ಕರ್ನಾಟಕ ನೀರಾವರಿ ನಿಗಮ ನಿಯಮಿತದ ನಿರ್ದೇಶಕರ ಮಂಡಳಿಯ ಅನುಮೋದನೆಯ ನಂತರ ಪರಿಷ್ಕೃತ ಯೋಜನೆಗೆ ಆಡಳಿತಾತ್ಮಕ ಅನುಮೋದಲನೆಯ ಕುರಿತು ಕ್ರಮ ಜರುಗಿಸಲಾಗುವುದು.

ಸರ್ಕಾರದ ಆದೇಶ ಸಂ. ಜಿಸಂಇ.115.ವಿಬ್ಯಾಇ.2003 ದಿನಾಂಕ 6.12.2003ರನ್ವಯ ಸಿಂಗಟಾಲೂರು ಅಣೆಕಟ್ಟು ಹಾಗೂ ಅದಕ್ಕೆ ಸಂಬಂಧಿಸಿದ ಕಾಮಗಾರಿಗಳ ಉಳಿಕೆ ಕೆಲಸಗಳನ್ನು ಕರ್ನಾಟಕ ರಾಜ್ಯ ನಿರ್ಮಾಣ ನಿಗಮದ ಮುಖಾಂತರ ಮುಂದುವರಿಸುವಂತೆ ಆದೇಶಿಸಲಾಗಿದ್ದು ಅದರಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

ಯೋಜನೆಯ ಪ್ರಾರಂಭದಿಂದ 3:2004ರ ಅಂತ್ಯದವರೆಗೆ ರೂ. 27.65 ಕೋಟಿ ವೆಚ್ಚಮಾಡಲಾಗಿದೆ. ಕರ್ನಾಟಕ ನೀರಾವರಿ ನಿಗಮ ನಿಯಮಿತದ ಅಡಿಯಲ್ಲಿ 2004–05ನೇ ಸಾಲಿನಲ್ಲಿ ಈ ಯೋಜನೆಗಾಗಿ ರೂ. 18.00 ಕೋಟಿ ಅನುದಾನವನ್ನು ಒದಗಿಸಿರುತ್ತದೆ.

† **ಶ್ರೀ ಎನ್.ಎಸ್. ಭೋಸರಾಜು :** ಮಾನ್ಯ ಅಧ್ಯಕ್ಷರೆ, ತುಂಗಭದ್ರಾ ನದಿಗೆ ಸುಮಾರು 50 ವರ್ಷಗಳ ಹಿಂದೆಯೇ ಏನು ಡ್ಯಾಂ ಕಟ್ಟಲಾಗಿದೆಯೋ ಇದರಿಂದಾಗಿ ರಾಯಚೂರು, ಕೊಪ್ಪಳ, ಬಳ್ಳಾರಿ ಜಿಲ್ಲೆಗಳಲ್ಲಿ ಅಂದಾಜು 10 ಲಕ್ಷ ಎಕರೆ ಜಮೀನುಗಳು ನೀರಾವರಿ ಸೌಲಭ್ಯವನ್ನು ಪಡೆದುಕೊಳ್ಳುವಂತಾಗಿದೆ. ಈಗಾಗಲೇ ರಿಸರ್ವಾಯರ್ ಕೆಪ್ಯಾಸಿಟಿ 132 ಟಿ.ಎಂ.ಸಿ. ಇದೆ. ಇಷ್ಟು ಟಿ.ಎಂ.ಸಿ. ಇದ್ದೂ ಎರಡನೇ ಬಾರಿ ತುಂಬಿದರೂ ಕೂಡ ನಮಗೆ ಫೆಬ್ರವರಿ, ಮಾರ್ಚ್ ಮತ್ತು ಏಪ್ರಿಲ್ ತಿಂಗಳುಗಳಲ್ಲಿ ಕಳೆದ 20 ವರ್ಷದ ಚಿತ್ರಣವನ್ನು ನೋಡಿದರೆ ಈ ಸಮಯಗಳಲ್ಲಿ ಸಾಕಷ್ಟು ಸ್ಪ್ಯಾಂಡಿಂಗ್ ಕ್ರಾಪ್ ಇರತಕ್ಕಂಥ ಬೆಳೆಗಳಿಗೆ ನೀರಿನ ಕೊರತೆಯಿಂದಾಗಿ ಅನೇಕ ಬಾರಿ ವಿವಿಧ ಸರ್ಕಾರಗಳು ಅಲ್ಲಿಯ ರೈತರ ಒತ್ತಾಯದ ಮೇರೆಗೆ ಭದ್ರಾ ರಿಸರ್ವಾಯರ್‌ನಿಂದ ನೀರನ್ನು ಬಿಟ್ಟಿರತಕ್ಕಂಥ ವಿಷಯ ನಮಗೆಲ್ಲರಿಗೂ ಗೊತ್ತಿರುವಂಥದ್ದೇ ಆಗಿದೆ. ಇಂಥ ಸಂದರ್ಭದಲ್ಲಿ ಬಚಾವತ್ ಟ್ರಿಬನಲ್ ಪ್ರಕಾರ ನಮ್ಮ ಹೂವಿನ ಹಡಗಲಿ ಪ್ಯಾಂತದಲ್ಲಿ ಕೇವಲ ಏಳೂವರೆ ಟಿ.ಎಂ.ಸಿ. ಗೆ ಅಲ್ಲೊಂದು ಅಣೆ ಕಟ್ಟು ಕಟ್ಟುವುದಕ್ಕೆ ಅವಕಾಶ ಇದ್ದರೆ ಆ ಬಗ್ಗೆ ಪರಿಶೀಲಿಸಿ ಕಳೆದ ಎರಡು ವರ್ಷದ ಹಿಂದೆ ಒಂದು ರಿಪೋರ್ಟ್ ಮಾಡಿ ಹದಿನೆಂಟೂವರೆ ಟಿ.ಎಂ.ಸಿ.ಗೆ ಅಲ್ಲೊಂದು ಸಿಂಗಟಾಲೂರು ಏತ ನೀರಾವರಿ ಯೋಜನೆ ಮಾಡಬೇಕೆಂದು ಪ್ರಪೋಸಲ್ ಸರ್ಕಾರದ ಮುಂದೆ ಬಂದಿದೆ. ಈ ಪ್ರಪೋಸಲ್ ಬಂದಂಥ ಸಂದರ್ಭದಲ್ಲಿ ಸಹಜವಾಗಿ ಐವತ್ತು ವರ್ಷದಿಂದ ತುಂಗಭದ್ರಾ ಡ್ಯಾಂನಿಂದ ಸುಮಾರು 10 ಲಕ್ಷ ಎಕರೆ ಜಮೀನುಗಳಿಗೆ ನೀರಾವರಿ ಸೌಲಭ್ಯವನ್ನು ಪಡೆದುಕೊಳ್ಳುತ್ತಿರುವವರು ಸಾಕಷ್ಟು ಪ್ರತಿಭಟನೆಯನ್ನು ರಾಯಚೂರು ಕೊಪ್ಪಳ, ಬಳ್ಳಾರಿ ಜಿಲ್ಲೆಯಲ್ಲಿ ಮಾಡಿದರು. ಈ ಪ್ರತಿಭಟನೆಯನ್ನು ಮಾಡಿದಾಗ ಅಂದಿನ ಸರ್ಕಾರ ಕೆ.ಸಿ. ರೆಡ್ಡಿಯವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ನೇಮಕ

ಮಾಡಿತು. ಈ ಸಮಿತಿಯ ವರದಿ ಕೂಡ ಈಗಾಗಲೇ ಸರ್ಕಾರಕ್ಕೆ ಬಂದಿದೆ. ಇಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೂವಿನ ಹಡಗಲಿಗೆ ಹೋಗುತ್ತಿರುವ ಸಂದರ್ಭದಲ್ಲಿ ಅಲ್ಲಿ ಸಿಂಗಟಾಲೂರು ಏತ ನೀರಾವರಿ ಬಗ್ಗೆ ಯಾರೋ ಕೆಲವರು ರೈತರು, ಜನರು ಕೇಳಿದಾಗ ಅದನ್ನು ತಕ್ಷಣ ಪೂರ್ಣಗೊಳಿಸುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಇದರಿಂದ ರಾಯಚೂರು, ಕೊಪ್ಪಳ. ಬಳ್ಳಾರಿ ಜಿಲ್ಲೆಯ ಪಶ್ಚಿಮ ಭಾಗದ ಪ್ರದೇಶಕ್ಕೆ ಸೇರಿದ ರೈತರು ಬಹಳ ಆತಂಕಕ್ಕೆ ಒಳಗಾಗಿದ್ದಾರೆ. 50 ವರ್ಷದಿಂದಲೂ ಅಲ್ಲಿ10 ಲಕ್ಷ ಎಕರೆ ಪ್ರದೇಶ ನೀರಾವರಿಯಲ್ಲಿ ಡೆವಲಪ್ ಮಾಡಿದ್ದರೂ ಕೂಡ ಕಳೆದ ನಾಲ್ಕು ವರ್ಷ ಸತತವಾಗಿ ಬರಗಾಲದಿಂದಾಗಿ ಬೇಸಿಗೆ ಬೆಳೆಗೆ ನೀರು ಹರಿಯುದೇ ಬಹಳ ತೊಂದರೆಯಾಗಿರುವಂಥ ಇಂಥ ಸಂದರ್ಭದಲ್ಲಿ ಈಗ ನೂತನವಾಗಿ ಸಿಂಗಟಾಲೂರು ಏತ ನೀರಾವರಿ ಯೋಜನೆಯನ್ನು ಮುಂದುವರಿಸುವ ಕ್ರಮವನ್ನು ಸರ್ಕಾರ ತೆಗೆದುಕೊಂಡಿರುವುದು ಎಷ್ಟರಮಟ್ಟಿಗೆ ಸಮಂಜಸ ಎಂದು ನಾವು ವಿಚಾರ ಮಾಡಬೇಕಾಗಿದೆ. ಈ ದಿಸೆಯಲ್ಲಿ ನಮ್ಮ ರಾಜ್ಯದವರು$7^1/_2$ ಟಿಎಂಸಿ ನೀರನ್ನು ಬಚಾವತ್ ತೀರ್ಪಿನ ಪ್ರಕಾರ ನಾವೇನು ಉಪಯೋಗ ಮಾಡಿಕೊಳ್ಳಬೇಕಿದೆ ಅದನ್ನು ಉಪಯೋಗಿಸಿಕೊಳ್ಳುವುದಕ್ಕೆ ನಮಗ್ಯಾರಿಗೂ ಆತಂಕವಿಲ್ಲ. ಅದನ್ನೂ ಕೂಡ ಮಾಡಬೇಕಾದರೆ ಮಾನ್ಯ ಕೆ.ಸಿ. ರೆಡ್ಡಿಯವರು ಅನೇಕ ಸಲಹೆ ಸೂಚನೆಗಳನ್ನು ನೀಡಿದ್ದಾರೆ. ನಮ್ಮ ಅಭಿಪ್ರಾಯವಾದ ರಾಯಚೂರು, ಕೊಪ್ಪಳ, ಬಳ್ಳಾರಿ ಜಿಲ್ಲೆಗಳ ರೈತರ ಸ್ಥಿತಿಗತಿಗಳನ್ನು ಕೂಡ ವರದಿಯಲ್ಲಿ ವಿವರಿಸಿರತಕ್ಕಂಥದ್ದನ್ನು ನೋಡಿ ಸರ್ಕಾರ ಅನೇಕ ಕ್ರಮಗಳನ್ನು ಕೈಗೆತ್ತಿಕೊಂಡು ಇರುವಂಥ 10 ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿ ವಿಚಾರದಲ್ಲಿ ಯಾವುದೇ ಕಾರಣಕ್ಕೂ ತೊಂದರೆ ಆಗದಂತೆ ನೋಡಿಕೊಂಡು ಈಗಾಗಲೇ ಏಳೂವರೆ ಟಿ.ಎಂ.ಸಿ. ನೀರಿಗೆ ಬಚಾವತ್ ತೀರ್ಪಿನಲ್ಲಿ ಏನು ಅವಕಾಶವನ್ನು ಕಲ್ಪಿಸಿದ್ದಾರೋ ಅಷ್ಟರಮಟ್ಟಿಗೆ ಮಾತ್ರ ಮುಂದುವರಿಯಬೇಕು ಎಂಬುದು ನಮ್ಮ ವಿನಂತಿಯಾಗಿದೆ.

ಶ್ರೀ ಡಿ.ಆರ್. ಪಾಟೀಲ್(ಗದಗ್) : ಮಾನ್ಯ ಅಧ್ಯಕ್ಷರೆ, ನಾವೂ ಕೂಡ ಅಫೆಕ್ಟೆಡ್ ಪಾರ್ಟೀಸ್ ಆಗಿರುವವರಿಂದ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಗದಗ್ ಮತ್ತು ಕೊಪ್ಪಳ ಜಿಲ್ಲೆಯ ಹೆಚ್ಚಿನ ಜಮೀನನ್ನು ನೀರಾವರಿಗೆ ಅಳವಡಿಸಿಕೊಳ್ಳಬೇಕೆಂದು ಹೇಳಿ ಮೊದಲಿದ್ದ ಯೋಜನೆಯನ್ನು ಮಾರ್ಪಾಡು ಮಾಡಿ 18.55 ಟಿ.ಎಂ.ಸಿ. ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕಾಗಿ 595 ಕೋಟಿ ರೂಪಾಯಿಗಳ ಯೋಜನೆಗೆ ಸರ್ಕಾರದಿಂದ ಮಂಜೂರಾತಿ ಆಯಿತು. ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಯ ಕೆಲವು ರೈತರು ಅದಕ್ಕೆ ವಿರೋಧ ಮಾಡಿದ್ದರಿಂದ, ಶ್ರೀ ಕೆ.ಸಿ. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿ, ಅವರು ವಿಚಾರ ಮಾಡಿ ವರದಿಯನ್ನು ಕೊಡುವಂತೆ ಸರ್ಕಾರ ಆದೇಶವನ್ನು ನೀಡಿತ್ತು. ಅವರು ಕೊಟ್ಟಂಥ ವರದಿಯಲ್ಲಿ 12 ಟಿ.ಎಂ.ಸಿ.

ನೀರನ್ನು ಉಪಯೋಗ ಮಾಡಿಕೊಳ್ಳುವಂತೆ ಆ ತಜ್ಞರ ವರದಿಯೂ ಬಂತು. ಅದು ಬಂದನಂತರ ಅಲ್ಲಿನ ರೈತರ ಮುಖಂಡರು, ಶಾಸಕರು, ಗದಗ್ ಮತ್ತು ಕೊಪ್ಪಳ ಜಿಲ್ಲೆಯ ರೈತ ಮುಖಂಡರು, ಶಾಸಕರ ಸಭೆಯನ್ನು ಮಾನ್ಯ ಮುಖ್ಯ ಮಂತ್ರಿಯವರು ಕರೆದು, ಎಲ್ಲರ ಅಭಿಪ್ರಾಯಗಳು, ಆ ಚರ್ಚೆಯಲ್ಲಿ ಏನು ತಿಳಿಸಿದರು, ಅದನ್ನು ಗಮನದಲ್ಲಿಟ್ಟುಕೊಂಡು, ಆ ಕಂಡೀಷನ್ ಮೇಲೆ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಮಳೆಗಾಲದ ಸಮಯದಲ್ಲಿ ಮಾತ್ರ ಹೆಚ್ಚುವರಿ ನೀರನ್ನು ಬಳಸತಕ್ಕದ್ದು. ಸಿಂಗಟಾಲೂರು ಏತ ನೀರಾವರಿ ಯೋಜನೆಯ ಸಂಗ್ರಹಣಾ ಸಾಮರ್ಥ್ಯ 2.6 ಟಿ.ಎಂ.ಸಿ. ಮಾತ್ರ ಇರತಕ್ಕದ್ದು. ಲೀನ್ ಸೀಸನ್‌ನಲ್ಲಿ 2.6 ಟಿ.ಎಂ.ಸಿ.ಗೂ ಹೆಚ್ಚು ನೀರನ್ನು ಬಳಸತಕ್ಕದ್ದಲ್ಲ. ಕುಡಿಯುವ ಹಾಗೂ ಅಗತ್ಯತೆಗಳ ಪೂರೈಕೆಗಾಗಿ ಮಾತ್ರವೇ 2.6 ಟಿ.ಎಂ.ಸಿ. ನೀರನ್ನು ಬಳಸತಕ್ಕದ್ದು. ಏತ ನೀರಾವರಿ ಯೋಜನೆಯು ಕೇವಲ ಏಕ ಬೆಳೆಗೆ ಮಾತ್ರ ಇರತಕ್ಕದ್ದು. ತುಂಗಭದ್ರಾ ಯೋಜನೆಗೆ ನಿಗದಿಗೊಳಿಸಲಾದ ಪ್ರಮಾಣದಷ್ಟು ನೀರು ನವೆಂಬರ್ ತಿಂಗಳಿನಿಂದ ಮೇ ತಿಂಗಳವರೆಗೆ ಹರಿಯುವಂತೆ ಮೇಲು ಉಸ್ತುವಾರಿ ಮಾಡತಕ್ಕದ್ದು, ಎಂದು ಉತ್ತರದಲ್ಲಿದೆ. ಆದುದರಿಂದ ಇಲ್ಲಿ ಅವರಿಗೆ ಯಾವುದೇ ರೀತಿಯ ತೊಂದರೆಯಾಗುವುದಿಲ್ಲ. ನಿಮಗೆ ಎಷ್ಟು ನೀರು ಬೇಕೋ ಅಷ್ಟು ನೀರು ಸಿಗುತ್ತದೆ. ಆದರೆ ಮಳೆಗಾಲದಲ್ಲಿ ಹರಿದು ಹೋಗುವಂಥ ನೀರನ್ನು ಉಪಯೋಗ ಮಾಡಿಕೊಳ್ಳುವಂಥಾದ್ದಕ್ಕೆ ಅವಕಾಶವಿದೆ. ಆದುದರಿಂದ ದಯಮಾಡಿ ತಾವು ಅದಕ್ಕೆ ಅಡ್ಡ ಬರಬಾರದು. ಇದರ ಬಗ್ಗೆ ಸಾಕಷ್ಟು ಚರ್ಚೆಯನ್ನು ಮಾಡಿದ್ದೇವೆ. ತಾವು ಹೆಚ್.ಕೆ.ಡಿ.ಬಿ. ಚೇರ್ಮನ್ ಆಗಿದ್ದಾಗ, ಆ ಭಾಗದ ಭತ್ತದ ಬೆಳೆಗಾರರಿಗೆ ಮಾನ್ಯ ನಾರಾಯಣರೆಡ್ಡಿಯವರನ್ನು ಕರೆದುಕೊಂಡು ಹೋಗಿ ಮಾರ್ಗದರ್ಶನ ಮಾಡಿಸಿ, ಆಂಧ್ರ ಪ್ರದೇಶ ಮತ್ತು ತಮಿಳುನಾಡಿನಲ್ಲಿರುವಂತಹ ರೀತಿ ದೊಡ್ಡ ಬಳ್ಳಾಪುರದಲ್ಲಿರುವಂತಹ ಶ್ರೀ ನಾರಾಯಣ ರೆಡ್ಡಿಯವರು, ಭತ್ತವನ್ನು ಕಡಿಮೆ ನೀರನ್ನು ಉಪಯೋಗ ಮಾಡಿಕೊಂಡು ಯಾವ ರೀತಿಯಲ್ಲಿ ಬೆಳೆಯಬಹುದೆಂಬ ಬಗ್ಗೆ ಹೊಸ ಪ್ರಯೋಗವನ್ನು ಬಹಳ ಯಶಸ್ವಿಯಾಗಿ ಮಾಡಿದ್ದಾರೆ, ಇದನ್ನು ಯೂನಿವರ್ಸಿಟಿ ಅಥಾರಿಟಿಯವರು ಕೃಷಿ ಇಲಾಖೆಯ ಅಧಿಕಾರಿಗಳು ಅದನ್ನು ಒಪ್ಪಿಕೊಂಡಿದ್ದಾರೆ. ಶ್ರೀ ನಾರಾಯಣ ರೆಡ್ಡಿಯವರನ್ನು ಆಂಧ್ರಪ್ರದೇಶ ಹಾಗೂ ತಮಿಳುನಾಡುಗಳು ಉಪಯೋಗ ಮಾಡಿಕೊಳ್ಳುತ್ತಿದೆ. ಇಲ್ಲಿ ನಮ್ಮ ಕರ್ನಾಟಕ ರಾಜ್ಯದಲ್ಲೂ ಉಪಯೋಗ ಮಾಡಿಕೊಳ್ಳಬೇಕು. ಇದಕ್ಕೆ ನೀರು ಮೂರನೇ ಒಂದು ಭಾಗ ಬೇಕಾಗುತ್ತದೆ. ಮತ್ತೆ ಬಿತ್ತನೆಯ ಬೀಜ ಶೇಕಡಾ 5ರಷ್ಟು, ಅಂದರೆ ಇದನ್ನು ನಾಟಿ ಮಾಡುವ ಹಾಗೆ ಇಲ್ಲ 15 ಸೆಂಟಿ ಮೀಟರ್‌ಗೆ ಒಂದು ಭತ್ತದ ಬೀಜವನ್ನು ಹೂಳುತ್ತಾ ಹೋಗುತ್ತಾರೆ. ಇದರಿಂದ ಯೀಲ್ಡ್ ದುಪ್ಪಟ್ಟಾಗಿದೆ. ಇನ್ ಷುಟ್ ಕಡಿಮೆ, ನೀರು ಕಡಿಮೆ ಬೆಳೆ ಎರಡರಷ್ಟು ಆಗಿದೆ, ಇದನ್ನು ಮೂರರಷ್ಟು ಮಾಡಿ ತೋರಿಸುತ್ತೇನೆಂಬ ವಿಶ್ವಾಸವನ್ನು ಅವರು ವ್ಯಕ್ತ ಮಾಡಿದ್ದಾರೆ. ಆದುದರಿಂದ ಇಲ್ಲಿ ನಾವು ನಿಮಗೆ ಬರುವಂತಹ ನೀರನ್ನು ಕಡಿಮೆ ಮಾಡಬೇಕೆಂದು ಅಪೇಕ್ಷೆ ಪಡುವುದಿಲ್ಲ.

ನಿಮಗೆ ಸಾಕಾಗಿ ಉಳಿದ ನೀರು ನಮಗೂ ಬರಬೇಕೆಂಬ ಇಚ್ಛೆ ಇದೆ. ಅದಕ್ಕೆ ತಾವೂ ದಯಮಾಡಿ ಯಾರೂ ಅಡ್ಡ ಬರಬಾರದು. ನಾವೂ ಸಹ ನಿಮ್ಮ ಅಣ್ಣ ತಮ್ಮಂದಿರು ಎಂದು ತಿಳಿದುಕೊಂಡು, ನಮಗೆ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

†**ಶ್ರೀ ಎನ್.ಎಸ್. ಭೋಸರಾಜು** : ಮಾನ್ಯ ಅಧ್ಯಕ್ಷರೆ, ಮಾನ್ಯ ಡಿ.ಆರ್. ಪಾಟೀಲ್‌ರವರು ನೀರನ್ನು ಹೇಗೆ ಉಪಯೋಗಿಸಿಕೊಳ್ಳಬೇಕು ಎನ್ನುವುದನ್ನು ಹೇಳಿದ್ದಾರೆ. ಈಗಾಗಲೇ ಎಲ್ಲರ ಗಮನದಲ್ಲಿರತಕ್ಕಂಥಾದ್ದು, ಮತ್ತು ರಾಜ್ಯ ಸರ್ಕಾರದ ರಿಕಾರ್ಡ್ಸ್‌ನಲ್ಲಿ ಇರುವಂಥಾದ್ದು 10 ಲಕ್ಷ ಎಕರೆಯಲ್ಲಿ, ಎರಡೂವರೆ ಲಕ್ಷ ಎಕರೆ ಕಳೆದ 20 ವರ್ಷಗಳಿಂದ, ಟೈಲ್‌ಎಂಡ್ ಆಗಿ ಅನೇಕ ಬಾರಿ ಹೋರಾಟಗಳು ಆಗಿ, ಅಧಿಕಾರಿಗಳು ಸಹ ಬಂದು ರಿಪೋರ್ಟ್ ಮಾಡಿರುವಂಥಾದ್ದನ್ನು ನೋಡಬಹುದು. ಈ 10 ಲಕ್ಷ ಎಕರೆ ಭೂಮಿಯಲ್ಲಿ ಎರಡೂವರೆ ಲಕ್ಷ ಎಕರೆ ಭೂಮಿಗೆ ನೀರು ಇಲ್ಲ. ತಾವು ಇವತ್ತು ಸದನ ಸಮಿತಿ ಮಾಡಿ ಅಲ್ಲಿಗೆ ಬಂದರೆ ನಮಗೆ ಸಂತೋಷವಾಗುತ್ತದೆ, ಆದುದರಿಂದ ಇರುವಂತಹ 50 ವರ್ಷಗಳ ಹಳೆಯ ಪ್ರಾಜೆಕ್ಟ್ ಅನ್ನು ಇಟ್ಟುಕೊಂಡು, ರೈತರಿಗೆ ತೊಂದರೆಯನ್ನು ಕೊಟ್ಟುಕೊಂಡು, ಇವತ್ತು ಮತ್ತೆ ಸರ್ಕಾರ ಇನ್ನೂರು ಕೋಟಿ, ಆರು ನೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ಅಲ್ಲಿ ಒಂದು ಪ್ರಾಜೆಕ್ಟ್ ಲಿಫ್ಟ್ ಇರಿಗೇಷನ್ ಪ್ರಾಜೆಕ್ಟ್ ಅನ್ನು ಮಾಡಿ, ಅಲ್ಲಿನ ರೈತರಿಗೂ ಸಿಗದಂತೆ ಮಾಡಿ, ಇಲ್ಲಿನ ರೈತರಿಗೂ ಸಿಗದ ಹಾಗೆ ಮಾಡಿ, ಆ ಪ್ರದೇಶದಲ್ಲೆಲ್ಲಾ ಸಾಕಷ್ಟು ತೊಂದರೆಯಾಗಿರುವಂಥಾದ್ದು ಆಗಿದೆ. ಆದುದರಿಂದ ಇಲ್ಲಿನ ಅನೇಕ ಕಾರಣಗಳನ್ನು ನೋಡಿದರೂ ಸಹಿತ, ಕಳೆದ ನಾಲ್ಕು ವರ್ಷಗಳಿಂದ ಈ ತುಂಗಭದ್ರಾ ನದಿಯಿಂದ ನೀರು ಹರಿದಿಲ್ಲ. ಅಲ್ಲಿ ಏಳು ತಿಂಗಳುಗಳ ಕಾಲ ನದಿಯಲ್ಲಿ ನೀರು ಇರುವುದಿಲ್ಲ. ಹೀಗಾಗಿ ಸಿರಗೊಪ್ಪ, ಮಾನ್ವಿ, ಮತ್ತು ಸಿಂಧನೂರುಗಳಿಗೂ ಇವತ್ತಿನ ದಿವಸ ಕುಡಿಯುವ ನೀರು ಸಹ ಇಲ್ಲವೆಂಬ ಪರಿಸ್ಥಿತಿ ಇದ್ದು, ತುಂಗಭದ್ರಾ ನದಿ ನೀರಿಲ್ಲದ ಪರಿಸ್ಥಿತಿಯ ಬಗ್ಗೆ ಸರ್ಕಾರದ ಗಮನಕ್ಕೂ ಬಂದಿದೆ. ಇದಕ್ಕೆ ಸರ್ಕಾರ ಸಮತೋಲನ ಜಲಾಶಯಗಳನ್ನು ನಿರ್ಮಾಣ ಮಾಡಿ, ಇವತ್ತು ಈ ತುಂಗಭದ್ರಾ ನದಿಗಳಿಗೆ ಆಧಾರವಾಗಿರುವಂತಹ ಟೌನ್‌ಗಳಿಗೆ, ನೀರು ಸರಬರಾಜು ಮಾಡುವಂತಹ ಪರಿಸ್ಥಿತಿ ಬಂದಿದೆ. ಇಂತಹ ಸಂದರ್ಭದಲ್ಲಿ ಮೇಲೆ ಇರುವಂತಹ ರೈತರುಗಳಿಗೆ, ಅನುಕೂಲ ಮಾಡಿಕೊಡುವುದಕ್ಕೆ ನಮ್ಮದು ಏನೂ ಅಬ್ಜೆಕ್ಷನ್ ಇಲ್ಲ. ಆದರೆ ಕೆಳಗಡೆ ನೀರು ಏನು ಹೋಗುತ್ತಿದೆ, ಈ ಓವರ್ ಫ್ಲೋ ಆಗಿರುವಂಥ ಪರಿಸ್ಥಿತಿಯನ್ನು ನಾವು ಕಳೆದ ಹತ್ತು ವರ್ಷಗಳಿಂದಲೂ ತುಂಗಭದ್ರಾ ಡ್ಯಾಮ್‌ನಲ್ಲಿ ನೋಡಿರಲಿಲ್ಲ. ಆದುದರಿಂದ ಇದರ ಕೆಪಾಸಿಟಿಯನ್ನು ಹೆಚ್ಚು ಮಾಡುವಂತಹ ಪ್ರಯತ್ನವನ್ನು ಸರ್ಕಾರ ಮಾಡಬೇಕೆಂದು ನಾವು ಒತ್ತಾಯ ಮಾಡುತ್ತಿದ್ದೇವೆ. ಇಲ್ಲಿ ಆಂಧ್ರ ಪ್ರದೇಶದ ಮತ್ತು ಕರ್ನಾಟಕ ರಾಜ್ಯಗಳ ಜಾಯಿಂಟ್

ಪ್ರಾಜೆಕ್ಟ್ ಆಗಿರುವುದರಿಂದ, ಈಗಾಗಲೇ ಮಾನ್ಯ ಜಲಸಂಪನ್ಮೂಲ ಸಚಿವರೂ ಸಹಿತ ಆಂಧ್ರಪ್ರದೇಶ ಸರ್ಕಾರದೊಡನೆ ಸಂಪರ್ಕ ನಡೆಸಿ, ಇವತ್ತು ರಿಸರ್ವಾಯರ್‌ನಲ್ಲಿ ಸಿಲ್ಟ್ ತೆಗೆಯುವಂಥಾದ್ದಾಗಲಿ, ಡ್ಯಾಮ್ ಗೇಟನ್ನು ಹೆಚ್ಚು ಮಾಡುವಂಥಾದ್ದರಲ್ಲಿ, ಆಗಲಿ ಈ ರೀತಿಯಾಗಿ ಎರಡು ಮೂರು ರೀತಿಯ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಈ ಹತ್ತು ಲಕ್ಷ ಎಕರೆ ನೀರು ಇಲ್ಲದಂತಹ ಸಂದರ್ಭದಲ್ಲಿ, ಸರ್ಕಾರವೂ ನೂರಾರು ಕೋಟಿ ರೂಪಾಯಿಗಳ ಮತ್ತೊಂದು ಪ್ರಾಜೆಕ್ಟ್ ಅನ್ನು ಮೇಲೆ ಮಾಡಿದರೆ ಏನಾಗುತ್ತದೆ? ಇಲ್ಲಿ ಬಚಾವತ್ ತೀರ್ಪಿನ ಪ್ರಕಾರ ಏಳೂವರೆ ಟಿ.ಎಂ.ಸಿ. ನೀರು ಮಾತ್ರ ನಮಗೆ ಇರುವಂಥಾದ್ದು, ಈಗ ಅದನ್ನು ಬಿಟ್ಟು 15 ಟಿ.ಎಂ.ಸಿ.16 ಟಿ.ಎಂ.ಸಿ. 12 ಟಿ.ಎಂ.ಸಿ. ಎಂದು ಹೋದರೆ, ಕೆಳಗಡೆ ಇರುವಂತಹ ರೈತರು ಮತ್ತು ಕೊಪ್ಪಳ ಹಾಗೂ ಬಳ್ಳಾರಿಯಲ್ಲಿರತಕ್ಕಂಥ, 50 ವರ್ಷಗಳ ಅಚ್ಚುಕಟ್ಟು ಏನು ಇದೆ, ಇದು ಸಾಕಷ್ಟು ತೀವ್ರ ತೊಂದರೆಗೊಳಗಾಗುತ್ತದೆಂಬ ಮಾತನ್ನು ಹೇಳುತ್ತೇನೆ. ನಾವು ಏನೇ ಪ್ರಾಜೆಕ್ಟ್‌ಗಳನ್ನು ಮಾಡಬೇಕಾದರೂ, ಸಿಂಗಟಾಲೂರು ಪ್ರಾಜೆಕ್ಟ್ ಮಾಡಬೇಕೆಂದರೆ ಅಲ್ಲಿನ ರೈತರ ಮನಸ್ಸನ್ನು ಮತ್ತು ಅವರನ್ನು ಸಂಪರ್ಕಿಸಿ, ಅವರಿಗೆ ಆತ್ಮ ವಿಶ್ವಾಸವನ್ನು ತುಂಬುವಂತಹ ಪ್ರಯತ್ನವನ್ನು ಮಾಡದಿದ್ದರೆ, ಆ ಮೂಲ ಪ್ರದೇಶಗಳಲೆಲ್ಲಾ ಸಾಕಷ್ಟು ವಿರೋಧವಾಗುವಂತಹ ಪರಿಸ್ಥಿತಿ ಇದೆ. ಆದುದರಿಂದ ದಯವಿಟ್ಟು ನಾನು ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಸಚಿವರಲ್ಲಿ ನಾನು ಪ್ರಾರ್ಥನೆ ಮಾಡುವುದೇನೆಂದರೆ, ಇವತ್ತು ಈ ಸಿಂಗಟಾಲೂರು ಪ್ರಾಜೆಕ್ಟ್ ಅನ್ನು ಮುಂದುವರೆಸದೇ, ಇವತ್ತು ಇರುವಂತಹ ಪರಿಸ್ಥಿತಿಯನ್ನೇ ಸ್ಟೇಟಸ್‌ಕೋ ಮೆಂಟೇನ್ ಮಾಡಿ, ಮತ್ತೆ ಅಲ್ಲಿ ಇರುವಂತಹ ರೈತರೊಡನೆ ಮತ್ತು ಜನಪ್ರತಿನಿಧಿಗಳೊಂದಿಗೆ ಚರ್ಚೆ ಮಾಡಿ, ಮತ್ತೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೇ, ನಾನು ರಾಯಚೂರು ಜಿಲ್ಲೆಯವನಾಗಿದ್ದು ಇದರ ಬಗ್ಗೆ ಸ್ವಲ್ಪ ಮಾತನಾಡುತ್ತೇನೆ.

ಅಧ್ಯಕ್ಷರು : ಇದು ಗಮನ ಸೆಳೆಯುವ ಸೂಚನೆಯಾಗಿದ್ದು, ಇದರಲ್ಲಿ ನೀವು ಸಿಗ್ನಿಟರಿಯಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ನಾವು ಮುಂದೆ ಮಾತನಾಡಲು ಅವಕಾಶವನ್ನು ಕೊಡಬೇಕು. ತಾವು ಗಮನ ಸೆಳೆಯುವ ಸೂಚನೆಗೆ ಎಲ್ಲರಿಗೂ ಮಾತನಾಡಲು ಅವಕಾಶವನ್ನು ಕೊಡುತ್ತಾ, ಹೋದರೆ ಆಗುವುದಿಲ್ಲ. ನಾವು ಇಲ್ಲಿ ಗಂಭೀರವಾಗಿ ಕುಳಿತಿದ್ದೇವೆ.

ಅಧ್ಯಕ್ಷರು : ಈಗ ಗಮನ ಸೆಳೆಯುವ ಸೂಚನೆಗೆ ಎಲ್ಲರಿಗೂ ಮಾತನಾಡಲು ಅವಕಾಶವನ್ನು ಕೊಡುವುದಕ್ಕೆ ಆಗುವುದಿಲ್ಲ. ಮಾನ್ಯ ಪಾಟೀಲರವರೇ, ಇದು ಗಮನ ಸೆಳೆಯುವ ಸೂಚನೆಯಾಗಿದ್ದು, ಇದಕ್ಕೆ ತಾವು ಸಿಗ್ನಿಟರಿಯಲ್ಲ, ನಿಯಮದ ಪ್ರಕಾರ ಆ ರೀತಿ ಅವಕಾಶವನ್ನು ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ದಯವಿಟ್ಟು ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು : ಆಯಿತು, ಎರಡು ನಿಮಿಷಗಳಲ್ಲಿ ತಮ್ಮ ಮಾತನ್ನು ಮುಗಿಸಿ.

† **ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ)** : ಮಾನ್ಯ ಅಧ್ಯಕ್ಷರೇ, ನಿಜವಾಗಿ ಈ ಯೋಜನೆ ಹೆಚ್ಚು ನೀರಾವರಿ ಆಗುವಂತಹ ಕ್ಷೇತ್ರವೆಂದರೆ ನನ್ನ ಮತ ಕ್ಷೇತ್ರ, ಇಲ್ಲಿ ಶೇಕಡಾ 80ರಷ್ಟು ಆಗುತ್ತದೆ. ಇಲ್ಲಿ ಗದಗ್‌ಗೆ ಸ್ವಲ್ಪ ಮಾತ್ರ ಹೋಗುತ್ತದೆ, ಅಂದರೆ ಸುಮಾರು ಎರಡು, ಮೂರು ಸಾವಿರ ಎಕರೆಗಳಿಗೆ ಹೋಗಬಹುದು. ಉಳಿದ ನೀರು ಮುಂಡರಗಿ, ಮತದಾರರ ಕ್ಷೇತ್ರಕ್ಕೆ ಬರತಕ್ಕಂಥ ಯೋಜನೆಯಾಗಿದೆ. ಅಂದರೆ ಸುಮಾರು ನೂರಾರು ವರ್ಷಗಳಿಂದ ಬರಗಾಲ ಪೀಡಿತ ಪ್ರದೇಶಗಳಿಗೆ ಅದು ಮೂರು ತಾಲ್ಲೂಕುಗಳಲ್ಲಿ ಇದು ಹರಿಯುತ್ತಾ ಇದೆ, ಅದು ಕೊಪ್ಪಳ ಹಳ್ಳಿಗಳು ಇವೆ, ಮತ್ತು ಹಡಗಲಿಯೂ ಹಾಗೆ ಇದೆ, ಮುಂಡರಗಿ ಮತ್ತು ಗದಗ್‌ಗೆ ಆಗುವಂತಹ ಯೋಜನೆಯಾಗಿದೆ, ಬಹುಶಃ ನಮ್ಮ ಹಿಂದಿನ ಸಚಿವರಾಗಿದ್ದು ಮಾನ್ಯ ಹೆಚ್.ಕೆ. ಪಾಟೀಲ್‌ರವರು ನೀರಾವರಿ ಮಂತ್ರಿಗಳಾದ ಮೇಲೆ ಏನಾಯಿತು ಎಂದು ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ, ಇಲ್ಲಿ ನಮ್ಮ ಅಧಿಕಾರಿಗಳು ಹೇಗಿರುತ್ತಾರೆಂದರೆ, ನಾವು ಅರ್ಧ ಟಿ.ಎಂ.ಸಿ ನೀರು ಬೇಕು, ನಾವು ನೀರಾವರಿ ಮಾಡಿಕೊಳ್ಳುತ್ತೇವೆಂದರೆ, ಅದಕ್ಕೆ ನೀರು ಇಲ್ಲವೆಂದು ಬರೆಯುತ್ತಾರೆ. ಮಾನ್ಯ ಹೆಚ್.ಕೆ. ಪಾಟೀಲ್‌ರವರು ನೀರಾವರಿ ಮಂತ್ರಿಗಳಾದ ಮೇಲೆ ನೂರು ಟಿ.ಎಂ.ಸಿ. ನೀರು ಪ್ರತಿವರ್ಷ ಹೆಚ್ಚಿಗೆ ಹರಿದು ಹೋಗುತ್ತಿದೆ. ಇದು ಇರುವಂತಹ ಪರಿಸ್ಥಿತಿ. ಇದನ್ನು ನಾವು ಉಪಯೋಗ ಮಾಡಿಕೊಳ್ಳುವುದಕ್ಕೆ ಆಗಿಲ್ಲ. ನಾವು ಇವತ್ತು ಅವರಿಗೆ ಅನ್ಯಾಯವಾಗಬೇಕೆಂದು ಅಲ್ಲ, ಅದರ ಬಗ್ಗೆ ನಮಗೆ ಏನೂ ತಕರಾರು ಇಲ್ಲ. ಬ್ಯಾಲೆನ್ಸಿಂಗ್ ಎಂದು ಕೇಳಿದ್ದಾರೆ. ಮಾಡಿಕೊಡಿ ರಿಸರ್ವಾಯರ್ ಮಾಡಕೊಡಿ, ನಮಗೆ ಸಂತೋಷವಾಗಿದೆ. ಈಗ ಇದರಲ್ಲಿ ಏನು ಹೇಳಿದ್ದಾರೆಂದರೆ ಹೊಳೆ ತುಂಬಿ ಹರಿಯುವ ಮುಂದೆ ನಾವು ಮಾಡುವಂಥಾದ್ದು ಒಂದೇ ಪೀಕ್ ಆ ಟೈಮ್‌ನಲ್ಲಿ ನಾವು ಮಾಡುತ್ತೇವೆ ಆದರೆ ಈ ವರ್ಷ ಮಳೆ ಬಂದಿಲ್ಲವೆಂದು ಹೇಳುವುದರಲ್ಲಿ ಅರ್ಥವಿಲ್ಲ. ಆ ಕಾರಣದಿಂದ ಯೋಜನೆಯನ್ನು ಈಗಾಗಲೇ ಮಾನ್ಯ ಹೆಚ್.ಕೆ. ಪಾಟೀಲ್‌ರವರು ನೀರಾವರಿ ಸಚಿವರಾಗಿದ್ದಾಗಲೇ, ಅವರೆಲ್ಲಾ ಕೂಡಿ ಒಂದು ತೀರ್ಮಾನವಾದ ಮೇಲೆ, ಅನಂತರ ಕೆ.ಸಿ. ರೆಡ್ಡಿಯವರ ಆಯೋಗವಾದ ಮೇಲೆ ಕೆ.ಸಿ. ರೆಡ್ಡಿಯವರು 12 ಟಿ.ಎಂ.ಸಿ. ನೀರನ್ನು ಉಪಯೋಗಿಸಬಹುದೆಂದು ವರದಿಯನ್ನು ಕೊಟ್ಟ ಮೇಲೆ, ಆ ಪ್ರಕಾರ ಇದನ್ನು ಮಾಡಿದ್ದಾರೆ. ಆ ಕಾರಣದಿಂದ ಇಲ್ಲಿ ಯಾರಿಗೂ ಅನ್ಯಾಯವಾಗುವುದಿಲ್ಲ. ಬಹಳ ತೊಂದರೆಯಲ್ಲಿರುವಂತಹ ಮೂರು ತಾಲ್ಲೂಕಿನ ಜನರಿಗೆ, ಒಳ್ಳೆಯದಾಗತಕ್ಕಂಥಾದ್ದು, ಇಲ್ಲಿ ಹೆಚ್ಚುವರಿ ನೀರು ಸಮುದ್ರಕ್ಕೆ ಸೇರಿಹೋಗುತ್ತದೆ, ಈ ಬೇರೆ ಕಡೆಗೆ ಹೋಗುವಂಥಾದ್ದನ್ನು ಉಪಯೋಗಿಕೊಳ್ಳುವಂಥಾದ್ದು, ಈ ಯೋಜನೆಯನ್ನು ಇಷ್ಟು ವರ್ಷಗಳು ಬಿಟ್ಟಿದ್ದು

ತಪ್ಪು. ಇಲ್ಲಿ ನಮ್ಮ ಪುಣ್ಯಕ್ಕೆ ಇದು ಆಗುತ್ತಿದೆ. ಇದರಲ್ಲಿ ನಮ್ಮ ಸದಸ್ಯರಾದ ಬೋಸರಾಜ್‌ರವರು ಎಕ್ಸ್‌ಪರ್ಟ್ ಆಗಿದ್ದಾರೆ. ನಿಜವಾಗಿ ಈ ವಿಷಯದಲ್ಲಿ ಸಂತೋಷ ಪಡುತ್ತೇನೆ, ಇದರಲ್ಲಿ ಅವರಿಗೆ ಅನುಭವವಿದೆ. ಆ ಕಾರಣದಿಂದ ನಾವು ನಿಮಗೆ ಅನ್ಯಾಯವಾಗಬೇಕೆಂದು ನಾವು ಹೇಳುವುದಿಲ್ಲ. ಇಲ್ಲಿ ನಮ್ಮ ರಾಜ್ಯಕ್ಕೆ ಅನುಕೂಲವಾಗಲಿ, ಅದೇ ರೀತಿಯಲ್ಲಿ ಬರಗಾಲದಲ್ಲಿ ಒಂದು ಹೊತ್ತಿನ ಊಟವೂ ಇಲ್ಲದಂತಹ ಪರಿಸ್ಥಿತಿ ಇರುವಂತಹ ತಾಲ್ಲೂಕುಗಳು ನಮ್ಮಲ್ಲಿ ಇವೆ. ನಾನು ತಮ್ಮನ್ನು ಕರೆದುಕೊಂಡು ಹೋಗುತ್ತೇನೆ. ಅಲ್ಲಿನ ಪರಿಸ್ಥಿತಿಯನ್ನು ತಾವು ನೋಡಿ. ಆ ಕಾರಣದಿಂದ ದಯವಿಟ್ಟು ತಾವು ಯಾರೂ ಇದಕ್ಕೆ ತಕರಾರು ಮಾಡಬಾರದೆಂದು ಈ ಮೂಲಕ ತಮ್ಮನ್ನು ಕೇಳಿಕೊಳ್ಳುತ್ತೇನೆ. ಆ ರಿಸರ್ವಾಯರ್ ಮಾಡಲಿ. ಅದಕ್ಕೆ ನಾವೆಲ್ಲರೂ ಸಹಕಾರ ಮಾಡುತ್ತೇನೆ. ದಯವಿಟ್ಟು ಇದಕ್ಕೆ ತಾವ್ಯಾರೂ ಆತಂಕ ಮಾಡಬಾರದು, ದಯವಿಟ್ಟು ಒಪ್ಪಿಕೊಳ್ಳಬೇಕು ಎಂದು ನಾನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ಸರ್ಕಾರದವರಿಗೂ ನಾನು ಮೊನ್ನೆ ಹೇಳಿದ್ದೇನೆ. ಅವರು ಮೊನ್ನೆ ಒಪ್ಪಿಕೊಂಡಿದ್ದಾರೆ. ಇದಕ್ಕೆ ಕೇವಲ 8–10 ಕೋಟಿ ರೂ ಬಿಡುಗಡೆ ಮಾಡುವುದರಿಂದ ಇನ್ನು 50 ವರ್ಷವಾದರೂ ಇದು ಮುಗಿಯುವುದಿಲ್ಲ. ಈಗಾಗಲೇ ಈ ಯೋಜನೆಗೆ 793 ಕೋಟಿ ರೂ. ಆಗಿದೆ. ಆದ್ದರಿಂದ, ಪ್ರತಿವರ್ಷ ಎರಡು ನೂರು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಈ ಯೋಜನೆಯನ್ನು ಮುಗಿಸಿಕೊಡಬೇಕು ಮತ್ತು ಅವರು ರಿಸರ್ವಾಯರ್ ಮಾಡಲು 200–300 ಕೋಟಿ ರೂ. ಬಿಡುಗಡೆ ಮಾಡಿದರೆ ನಾವು ಖಂಡಿತವಾಗಿಯೂ ಸಂತೋಷಪಡುತ್ತೇನೆ. ಏಕೆಂದರೆ, ನೀರನ್ನು ನಮ್ಮ ರಾಜ್ಯದವರು ಉಪಯೋಗ ಮಾಡಬೇಕು. ಇಲ್ಲದಿದ್ದರೆ ನೀರು ಸುಮ್ಮನೆ ಹರಿದು ಹೋಗುತ್ತದೆ. ಈ ರಿಸರ್ವಾಯರನ್ನು ಮಾಡಿದರೂ ಕೂಡ ನೀರು ಹರಿದು ಹೋಗುತ್ತದೆ. ನಾವು ಉಪಯೋಗಿಸುವುದು 12 ಟಿ ಎಂ ಸಿ 80 ಟಿ ಎಂ ಸಿ ನೀರು ಹೆಚ್ಚಾಗಿ ಹರಿದು ಹೋಗುತ್ತದೆ. ಅದಕ್ಕಾಗಿ ರಿಸರ್ವಾಯರ್ ಮಾಡಿದರೆ ಅವರಿಗೂ ಉಪಯೋಗವಾಗುತ್ತದೆ. ಆ ರೀತಿಯಾಗಿ ಸರ್ಕಾರದವರು ಕ್ರಮ ಕೈಗೊಳ್ಳಬೇಕು. ಎರಡೂ ಯೋಜನೆಗಳನ್ನು ಪ್ರಾರಂಭ ಮಾಡಬೇಕು. ನಮ್ಮದು ಚಾಲೂ ಇದೆ, ಅದಕ್ಕೆ ಹಣ ಬಿಡುಗಡೆ ಮಾಡಿ ಅನುಕೂಲ ಮಾಡಿಕೊಡಬೇಕು ಎಂದು ತಮ್ಮ ಮೂಲಕ ನಾನು ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎ, ಪಾಪರೆಡ್ಡಿ(ರಾಯಚೂರು) : ಮಾನ್ಯ ಅಧ್ಯಕ್ಷರೇ, ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳಲು ಇಚ್ಛೆಪಡುತ್ತಿದ್ದೇನೆ. ಈಗಾಗಲೇ ರಾಯಚೂರು ತಾಲ್ಲೂಕಿನಲ್ಲಿ ನೀರು ಇಲ್ಲ. ಎರಡನೇ ತಾರೀಖಿನ ದಿವಸ ನೀರು ಬಿಟ್ಟಿದ್ದಾರೆ. ಅಲ್ಲಿನ ರೈತರಿಗೆ ಇವತ್ತು ನೀರು ಇಲ್ಲ. ನಮ್ಮ ರಾಯಚೂರು ತಾಲ್ಲೂಕಿನಲ್ಲಿ ಬರುವಂಥ ಒಟ್ಟು ಎರಡು ಲಕ್ಷ ಎಕರೆ ಜಮೀನಿಗೆ 10 ವರ್ಷಗಳಿಂದ ನೀರಿಲ್ಲ. ನೀರಾವರಿಯಾಗಿ, ಎಲ್ಲಾ ಲೆವೆಲ್ಲಿಂಗ್ ಆಗಿ 87ಕ್ಕೆ ನೀರು ಬಂತು. 87 ಆದಮೇಲೆ ಇಲ್ಲಿಯವರೆಗೆ

ಅಲ್ಲಿಯ ಜನ ನೀರನ್ನೇ ಕಾಣುತ್ತಿಲ್ಲ. ಅಂಥ ಪರಿಸ್ಥಿತಿ ಇರುವಾಗ, ಮತ್ತೆ ಮೇಲೊಂದು ಅಣೆಕಟ್ಟು ಕಟ್ಟೆ ಅಲ್ಲಿ 12 ಟಿ ಎಂ ಸಿ ನೀರು ನಿಲ್ಲಿಸಿದರೆ, ನಮಗೆ ನೀರು ಎಲ್ಲಿಂದ ಬರುತ್ತದೆ? ನಮಗೆ ನೀರು ಬರಲು ಸಾಧ್ಯವೇ ಇಲ್ಲ. ರಾಯಚೂರು ತಾಲ್ಲೂಕಿನಲ್ಲಿರುವ ಟೈಲ್‌ಎಂಡ್ ಲ್ಯಾಂಡಿಗೆ ಈಗ ನೀರು ಬರುತ್ತಿಲ್ಲ. ಆದ್ದರಿಂದ, ಇದರ ಬಗ್ಗೆ ತಜ್ಞರ ಸಮಿತಿಯಿಂದ ವಿಚಾರ ಮಾಡಿ, ಅಣೆಕಟ್ಟು ಕಟ್ಟಿ ಅವರಿಗೆ ನೀರು ಕೊಡಬೇಕು. ಅಲ್ಲಿ ಎಲ್ಲಾ ಇನ್‌ಫ್ರಾಸ್ಟ್ರಕ್ಚರ್ ಇದೆ, ಕಾಲುವೆಗಳಿವೆ, ಎಲ್ಲಾ ಇದೆ, ಇಂಥ ಕಡೆಗಳಲ್ಲಿರುವ ಜನರಿಗೆ ನೀರು ಕೊಡುವುದನ್ನು ಬಿಟ್ಟು, 500–600 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಬೇರೆ ಕಡೆ ಅಣೆಕಟ್ಟು ಕಟ್ಟುವುದರಿಂದ, ನಮಗೆ ಬರುವ ನೀರನ್ನು ಬೇರೆ ಕಡೆಗೆ ಕೊಡುವುದರಿಂದ, ನಮಗೆ ತೊಂದರೆಯಾಗುತ್ತದೆ. ಇರುವಂಥ ಜನರು ಸತ್ತು ಬೇರೆಯವರು ಬದುಕಿದರೆ ಒಳ್ಳೆಯದಲ್ಲ. ಈಗ ನಮ್ಮಲ್ಲಿ ಎರಡು ಲಕ್ಷ ಎಕರೆ ಜಮೀನಿಗೆ ನೀರಾವರಿ ಇಲ್ಲ. ಆ ಕಾರಣದಿಂದ, ತಾವು ದಯಮಾಡಿ ಈ ಬಗ್ಗೆ ವಿಚಾರ ಮಾಡಿ ಕೆಲಸ ಮಾಡಬೇಕು ಎಂದು ನಾನು ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಇಲ್ಲದಿದ್ದರೆ, ಇಡೀ ರಾಯಚೂರು ತಾಲ್ಲೂಕಿನಲ್ಲಿರುವಂಥ ರೈತ ಸಮುದಾಯ ದಂಗೆಯೇಳುವ ಪ್ರಶ್ನೆ ಬರುತ್ತದೆ. ಬೀದಿಗಿಳಿದು ಹೋರಾಟ ಮಾಡುವ ಪ್ರಶ್ನೆ ಬರುತ್ತದೆ. ಆದ್ದರಿಂದ, ಇದೆಲ್ಲವನ್ನೂ ಅರ್ಥಮಾಡಿಕೊಂಡು ತಾವು ಮುಂದಿನ ಹೆಜ್ಜೆಯನ್ನು ಇಡಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳಲು ಇಚ್ಛಿಪಡುತ್ತಿದ್ದೇನೆ.

† **ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)** : ಸನ್ಮಾನ್ಯ ಅಧ್ಯಕ್ಷರೇ, ಗೌರವಾನ್ವಿತ ಸದಸ್ಯರಾಗಿರುವಂಥ ಮಾನ್ಯ ಭೋಸರಾಜ್‌ರವರು, ಹಂಪನಗೌಡ ಬಾದರ್ಲಿಯವರು ಮತ್ತು ಅಮರೇಗೌಡರು ಎತ್ತಿರುವಂಥ ಗಮನ ಸೆಳೆಯುವ ಸೂಚನೆಯಲ್ಲಿ, ಭೋಸರಾಜುರವರು, ಎಸ್.ಎಸ್. ಪಾಟೀಲರು, ಡಿ.ಆರ್. ಪಾಟೀಲರು ಮತ್ತು ರೆಡ್ಡಿಯವರು ಮಾತನಾಡಿ ವಿವರವಾಗಿ ವಿಚಾರಗಳನ್ನು ಹೇಳಿದ್ದಾರೆ. ರಾಯಚೂರಿನಲ್ಲಿ ಈಗಾಗಲೇ 10 ಲಕ್ಷ ಎಕರೆಗಳಷ್ಟು ಅಚ್ಚುಕಟ್ಟನ್ನು, ತುಂಗಭದ್ರಾ ಅಣೆಕಟ್ಟು ಕಟ್ಟಿದಾಗಿನಿಂದ ನೀರಾವರಿ ಮಾಡುತ್ತಿದ್ದೇವೆ. ಅವರಿಗೇ ನೀರು ಸಾಕಾಗುವುದಿಲ್ಲ. ಈಗ ಮತ್ತೆ ನೀವು ಇನ್ನೊಂದು ಅಣೆಕಟ್ಟು ಕಟ್ಟಿ ಗದಗ್ ಮತ್ತು ಕೊಪ್ಪಳ ಜಿಲ್ಲೆಗೆ ನೀರನ್ನು ಕೊಡುತ್ತೇವೆ ಎಂದು ಹೇಳಿದರೆ ಅದರಿಂದ ತೊಂದರೆಯಾಗುತ್ತದೆ ಎನ್ನುವ ಮಾತನ್ನು ಹೇಳಿದ್ದಾರೆ. ಬಚಾವತ್ ಅವಾರ್ಡಿನ ಹಿನ್ನೆಲೆಯಲ್ಲಿ, ನಾವು ಇದರ ಬಗ್ಗೆ ಬಹಳ ದೀರ್ಘವಾಗಿ ಮಾತನಾಡತಕ್ಕಂಥಾದ್ದು, ಹೇಳತಕ್ಕಂಥಾದ್ದರಿಂದ ರೈತರ ಮತ್ತು ರಾಜ್ಯದ ನೀರಿನ ಹಕ್ಕಿನ ರಕ್ಷಣೆ ಮಾಡುವ ದೃಷ್ಟಿಯಿಂದ ತೊಂದರೆಯಾಗುತ್ತದೆ ಎಂದು ನಾನು ಭಾವಿಸಿದ್ದೇನೆ. ನಮ್ಮ ಸರ್ಕಾರದ ಮೊದಲನೇ ಆದ್ಯತೆ, ನೀರಿನ ಸದ್ಬಳಕೆ ಮತ್ತು ನಮ್ಮ ನೀರಿನ ರಕ್ಷಣೆ. ಇವೆರಡೂ ಬಹಳ ಮುಖ್ಯವಾಗಿರತಕ್ಕಂಥಾದ್ದು. ಹಿಂದಿನಿಂದ ಅಚ್ಚುಕಟ್ಟಿನಲ್ಲಿ ಯಾರು ಬೆಳವಣಿಗೆ ಮಾಡಿದ್ದಾರೆ. ಇದು ರಾಯಚೂರು ಟೌನಿನವರೆಗೂ ಬರುತ್ತದೆ. ಟೈಲ್‌ಎಂಡ್‌ನಲ್ಲಿ ನೀರು ಬರದೇ ಇರತಕ್ಕಂಥಾದ್ದನ್ನೆಲ್ಲಾ ನಾನು ಸ್ವತಃ ಅನೇಕ ಸಂದರ್ಭಗಳಲ್ಲಿ

ಗಮನಿಸಿದ್ದೇನೆ, ಇವುಗಳೆಲ್ಲಾ ನಾವು ನೋಡಿರತಕ್ಕಂಥ ವಿಚಾರಗಳೇ, ಅವರ ಹಿತವನ್ನೂ ಸಹ ಗಮನದಲ್ಲಿಟ್ಟುಕೊಂಡು ಈ ಕಾರ್ಯಕ್ರಮವನ್ನು ಮಾಡುತ್ತೇವೆ. ತಮಗೆ ಗೊತ್ತಿರುವ ಹಾಗೆ, ಈ ಸದನಕ್ಕೆ ಗೊತ್ತಿರುವ ಹಾಗೆ ರಾಜ್ಯದಲ್ಲಿ, ನೀರಾವರಿ ವಿಚಾರದಲ್ಲಿ ಬಾಳೇಕುಂದ್ರಿಯವರು ಮತ್ತು ಕೆ.ಸಿ. ರೆಡ್ಡಿಯವರು ಬಹಳ ದೊಡ್ಡ ತಜ್ಞರು. 2003ನೇ ಇಸವಿಯಲ್ಲಿ ಕೆ.ಸಿ. ರೆಡ್ಡಿಯವರ ನೇತೃತ್ವದ ಒಂದು ಸಮಿತಿ ಒಂದು ವರದಿಯನ್ನು ಕೊಟ್ಟಿದೆ. ಎರಡೂ ಕಡೆಯ ರೈತರ ಬಗ್ಗೆ, ಮಾನ್ಯ ಎಸ್.ಎಸ್. ಪಾಟೀಲರು ಆ ಕಡೆ ಕುಳಿತುಕೊಂಡು ವಿಚಾರ ಮಾಡುತ್ತಿದ್ದರು. ಮಾನ್ಯ ಡಿ.ಆರ್. ಪಾಟೀಲರು ಈ ಕಡೆ ಇರುತ್ತಿದ್ದರು. ಎಸ್.ಎಸ್. ಪಾಟೀಲ್ ಮತ್ತು ಡಿ.ಆರ್. ಪಾಟೀಲರಿಬ್ಬರಿಗೂ ಒಂದೇ ಒಪೀನಿಯನ್ ಇದ್ದದ್ದು ಈ ಸಿಂಗಟಾಲೂರು ಯೋಜನೆ ಒಂದರಲ್ಲೇ, ಬಾಕಿ ಎಲ್ಲಾ ವಿಚಾರಗಳಲ್ಲೂ ಅವರು ಆ ಕಡೆ, ಈ ಕಡೆ ಇರುತ್ತಿದ್ದರು. ಈಗ ಇಬ್ಬರೂ ಒಟ್ಟಾಗಿದ್ದಾರೆ. ನಾವು ಕಾಂಗ್ರೆಸ್ ಜೊತೆಯಲ್ಲಿ ಒಟ್ಟಿಗೆ ಆದಹಾಗೆ ಅವರೂ ಈಗ ಒಟ್ಟಾಗಿದ್ದಾರೆ. ಡಿ.ಆರ್. ಪಾಟೀಲ್ ಮತ್ತು ಎಸ್.ಎಸ್. ಪಾಟೀಲರ ಆತಂಕವನ್ನೂ ಸರ್ಕಾರ ಅರ್ಥಮಾಡಿಕೊಂಡಿದೆ. ಕೆ.ಸಿ. ರೆಡ್ಡಿಯವರ ನೇತೃತ್ವದಲ್ಲಿ ರಚಿಸಲಾಗಿದ್ದ ಸಮಿತಿಯು 2003ರಲ್ಲಿ ಕೊಟ್ಟಿರತಕ್ಕಂಥ ಸಲಹೆಗಳ ಬಗ್ಗೆ ಅವತ್ತಿನ ಮುಖ್ಯಮಂತ್ರಿಗಳು ಇವರೆಲ್ಲರನ್ನೂ ಕರೆಸಿ ಒಂದು ಅಮಿಕಬಲ್ ಸೆಟಲ್‌ಮೆಂಟ್ ಆಗುವ ರೀತಿಯಲ್ಲಿ ಒಂದು ನಿರ್ಧಾರವನ್ನು ತೆಗೆದುಕೊಂಡಿದ್ದಾರೆ. ಆದ್ದರಿಂದ ಈ ಯೋಜನೆಯನ್ನು ಮುಂದುವರೆಸುತ್ತೇವೆ. ಕೆಳಗಡೆ ಇರತಕ್ಕಂಥ ರೈತರಿಗೆ ನೀರು ಸಿಗುವಂತೆ ಅವರ ರಕ್ಷಣೆಯನ್ನೂ ಸಹಿತ ಸರ್ಕಾರ ಮಾಡುತ್ತವೆ ಎನ್ನುವ ಭರವಸೆಯನ್ನು ನಾನು ಕೊಡುತ್ತೇನೆ.

ಶ್ರೀ ಎಸ್.ಎಸ್. ಭೋಸರಾಜು : ಅವತ್ತು ಕೆ.ಸಿ. ರೆಡ್ಡಿಯವರು ಕೊಟ್ಟಿರುವ ವರದಿಯಲ್ಲಿ 12.95 ಟಿ.ಎಂ.ಸಿ. ನೀರನ್ನು ಉಪಯೋಗ ಮಾಡಬೇಕು, ಹೀಗೆ ಅನೇಕ ಷರತ್ತುಗಳನ್ನೂ ಅವರು ಹಾಕಿದ್ದಾರೆ. ಆದರೆ ತಮ್ಮ ರಿಪ್ಲೈನಲ್ಲಿ ತಪ್ಪಾಗಿ 15.95 ಎಂದು ಇದೆ. ದಯವಿಟ್ಟು ಇದನ್ನು ವೆರಿಫಿಕೇಷನ್ ಮಾಡಬೇಕು. ಅದು ಕೇವಲ 12.95, ನಮ್ಮ ಹತ್ತಿರ ಆ ರಿಪೋರ್ಟ್ ಇದೆ. ಎರಡನೆಯದಾಗಿ, ತಾವು ಯೋಜನೆಯನ್ನು ಮುಂದುವರೆಸುತ್ತೇವ ಎಂದು ಹೇಳಿದಿರಿ. ಅದಕ್ಕೆ ಈಗ ತಾವು 18 ಕೋಟಿ ರೂಪಾಯಿಗಳನ್ನು ಒದಗಿಸಿದ್ದೀರಿ. ಅನೇಕ ಬಾರಿ ತಾವು ಅಲ್ಲಿಗೆ ಬಂದಂಥ ಸಂದರ್ಭಗಳಲ್ಲಿ, ಈಗಾಗಲೇ ಇರುವ ಅಚ್ಚುಕಟ್ಟು ಪ್ರದೇಶದ ರೈತರ ಆತಂಕವನ್ನು ತಾವು ನೋಡಿದ್ದೀರಿ. ಬಚಾವತ್ ಟ್ರಿಬ್ಯುನಲ್ ಪ್ರಕಾರ ನಮ್ಮ ಕರ್ನಾಟಕದ ಪಾಲಿನ ನೀರನ್ನು ಉಪಯೋಗಿಸುವಲ್ಲಿ ನಮ್ಮದೇನೂ ಅಬ್ಜೆಕ್ಷನ್ ಇಲ್ಲ. ಇದು ಮೊದಲಿನಿಂದಲೂ ನಮ್ಮ ಸ್ಟ್ಯಾಂಡ್. ಇದನ್ನೇ ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿಯ ಹಳೆ ಅಚ್ಚುಕಟ್ಟುನಲ್ಲಿವವರೂ ಹೇಳುತ್ತೇವೆ. ಬಚಾವತ್ ತೀರ್ಪಿನಲ್ಲಿ ಓವರ್ ಅಂಡ್ ಅಬೋವ್ 7.5 ಟಿ.ಎಂ.ಸಿ. ಮಾತ್ರ ಎಂದು ಹೇಳಿದ್ದಾರೆ. ಆದರೆ ಇವರು 18 ಟಿ ಎಂ ಸಿ ಗೆ ಹೋದರು. ನಂತರ ನಾವು ಪ್ರತಿಭಟನೆ ಮಾಡಿದ ನಂತರ 12.95 ಕ್ಕೆ ಬಂದಿದ್ದಾರೆ. ಆದರೆ ರಿಪ್ಲೈನಲ್ಲಿ ಅದು 15.95

ಎಂದು ಇದೆ. ಅದನ್ನು ಸರಿಪಡಿಸಬೇಕು. ಅದು ರೆಕಾರ್ಡ್ ಆಗಬಾರದು. ಅದಕ್ಕೆ ತಾವು ಈ ವರ್ಷ 18 ಕೋಟಿ ರೂಪಾಯಿಗಳ ಬಜೆಟ್ ಇಟ್ಟಿದ್ದೀರಿ. ಈ 18 ಕೋಟಿ ರೂನಲ್ಲಿ ಅವರು ಏನೇನು ಕಂಡೀಷನ್ಸ್ ಹಾಕಿದ್ದಾರೆ. ಆ ಕಾರ್ಯಕ್ರಮಗಳನ್ನು ಮಾಡಬೇಕು. ಸಮತೋಲನ ಜಲಾಶಯಗಳನ್ನು ನಿರ್ಮಿಸಬೇಕು. ಡೌನ್ ಸ್ಟ್ರೀ ಆಫ್ ದಿ ರಿವರ್‌ನಲ್ಲಿ ನಾಲ್ಕು ಬ್ಯಾರೇಜುಗಳನ್ನು ಕಟ್ಟಿಸಬೇಕು ಎಂದೆಲ್ಲಾ ಹೇಳಿದ್ದಾರೆ. ಈಗ ಅವುಗಳನ್ಯಾವುದನ್ನೂ ಮಾಡುತ್ತಿಲ್ಲ. ಆದರೆ ಈಗ ಮತ್ತೆ ಮೇಲೆ ಅಣೆಕಟ್ಟು ಕಟ್ಟಲು ಹೊರಟುಬಿಟ್ಟಿದ್ದಾರೆ. ನಮ್ಮ ಜಲಾಶಯಕ್ಕೆ ನೀರು ಬರಲಾರದಂತೆ, ಈಗ ಮೇಲೆ ಅಣೆಕಟ್ಟು ಕಟ್ಟಲು ಕೆಲಸ ಪ್ರಾರಂಭ ಮಾಡಿದ್ದಾರೆ, ದಯವಿಟ್ಟು ಅದನ್ನು ಸ್ಟಾಪ್ ಮಾಡಿ. ಅದರಿಂದ ಕೆಳಗಿರತಕ್ಕಂತ 10 ಲಕ್ಷ ಎಕರೆಗೆ ತೊಂದರೆಯಾಗುತ್ತದೆ. ಅದಕ್ಕೆ ಬೇಕಾಗಿರುವಂತೆ ಡೌನ್ ಸ್ಟ್ರೀಂನಲ್ಲಿ ರಿಸರ್ವಾಯರ್‌ಗಳನ್ನು ನಿರ್ಮಿಸತಕ್ಕಂಥಾದ್ದು ಮತ್ತು ಕೆ ಸಿ ರೆಡ್ಡಿಯವರು ಸೂಚಿಸಿರುವಂಥ ಇತರ ಎಲ್ಲಾ ಕ್ರಮಗಳನ್ನು ಕಾರ್ಯರೂಪಕ್ಕೆ ತಂದು, ನಂತರ ಈ ಸಿಂಗಟಾಲೂರು ಏತ ನೀರಾವರಿ ಯೋಜನೆಗೆ ತಾವು ಚಾಲನೆ ನೀಡಬೇಕು. ಅದೂ ಸಹ, ಕೆ ಸಿ ರೆಡ್ಡಿಯವರು ಹೇಳಿರುವ ರೀತಿಯಲ್ಲಿ ಕೆಳಗಿರುವ ನಮ್ಮ ರೈತರಿಗೆ ತೊಂದರೆಯಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ಸರ್ಕಾರದ ಮೇಲಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ನಾನು ಕೊಟ್ಟಿರತಕ್ಕಂಥ ಅಂಕಿ ಅಂಶಗಳಲ್ಲಿ ಏನಾದರೂ ತಪ್ಪಿದ್ದರೆ ಅದನ್ನು ಸರಿಪಡಿಸಿಕೊಳ್ಳುವ ಭರವಸೆಯನ್ನು ನಾನು ಕೊಡುತ್ತೇನೆ. ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಅರ್ಥ ಮಾಡಿಕೊಂಡಿದ್ದೇವೆ. ಈಗಾಗಲೇ ನಾವು ಸದನದಲ್ಲಿ ರಾಜ್ಯ ಸರ್ಕಾರದ ಪರವಾಗಿ ಈ ರಾಜ್ಯದ ಜನತೆಗೆ, ವಿಶೇಷವಾಗಿ ಆ ಭಾಗದ ರೈತರಿಗೆ ಭರವಸೆಯನ್ನು ಕೊಟ್ಟಿದ್ದೇವೆ, ನಿಮಗೆ ತೊಂದರೆಯಾಗದ ಹಾಗೆ ನಾವು ಕೆಲಸ ಮಾಡುತ್ತೇವೆ.

ವಿಷಯ (x) : ಕೆ.ಜಿ.ಎಫ್. ನಗರದಲ್ಲಿ ಒಳಚರಂಡಿ ವ್ಯವಸ್ಥೆ ಬಗ್ಗೆ

ಶ್ರೀ ಎಸ್. ರಾಜೇಂದ್ರನ್(ಕೆ.ಜಿ.ಎಫ್) : ಮಾನ್ಯ ಅಧ್ಯಕ್ಷರೇ, I call the attention of the Government regarding drinking water and non-drianage system in KGF city.

†**ಶ್ರೀ ಪಿ.ಜಿ.ಆರ್. ಸಿಂಧ್ಯ (ಬೃಹತ್, ಮಧ್ಯಮ ಮತ್ತು ಸಣ್ಣ ಕೈಗಾರಿಕೆ ಸಚಿವರು) (ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ)** : ಮಾನ್ಯ ಅಧ್ಯಕ್ಷರೇ, ಕೆ.ಜಿ.ಎಫ್. ಕ್ಷೇತ್ರದ ಗೌರವಾನ್ವಿತ ಶಾಸಕರಾದ ಮಾನ್ಯ ರಾಜೇಂದ್ರನ್‌ರವರು, ಕೆ.ಜಿ.ಎಫ್. ನಗರದ ಅಸಮರ್ಪಕ ನೀರು ಸರಬರಾಜು ಅವ್ಯವಸ್ಥೆಯನ್ನು ಹಾಗೂ ಒಳಚರಂಡಿ ವ್ಯವಸ್ಥೆ ಇಲ್ಲದಿರುವುದರಿಂದ, ಅಲ್ಲಿನ ಸಾರ್ವಜನಿಕರು ಅನುಭವಿಸುತ್ತಿರುವ ಪರಿಸ್ಥಿತಿಯ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆದಿದ್ದಾರೆ. ನಾನು ಈ ಕೆಳಕಂಡ ಹೇಳಿಕೆಯನ್ನು ನೀಡಲು ಇಚ್ಛೆ ಪಡುತ್ತೇನೆ.

ಕುಡಿಯುವ ನೀರು ಪೂರೈಕೆ ವ್ಯವಸ್ಥೆ :